# ECHO OF HIS CALL

ECHO OF HIS CALL
REACHING NATIONS
SINCE 1969

1969 TO 2029

# ಕರೆಯ ಪ್ರತಿಧ್ವನಿ

**KANNADA**

*India's National Spiritual Newspaper*

₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

**Editor : S. SAM SELVA RAJ** | **16 Languages** | **Associate Editor : Rev. R. Rama Krishna**

**Vol. XXVII** | YEAR OF OUR LORD JESUS CHRIST, 2025 DECEMBER | **No.11**


## ಪರಿಶುದ್ಧ ಸತ್ಯವೇದ

ದಯಮಾಡಿ ಈ ಕೆಳಗಿನ ವಚನಗಳನ್ನು **ಕಂಠಪಾಠ ಮಾಡಿರಿ.**

**ಯೆಶಾಯ 9:2-7**

2. ಕತ್ತಲಲ್ಲಿ ಸಂಚರಿಸಿದ ಜನರಿಗೆ ದೊಡ್ಡ ಬೆಳಕು ಕಾಣಿಸಿತು. ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು.
3. ನೀನು ಪ್ರಜೆಗಳನ್ನು ವೃದ್ಧಿಗೊಳಿಸಿದ್ದಿ, ಅವರಿಗೆ ಸಂತೋಷವನ್ನು ಹೆಚ್ಚಿಸಿದ್ದಿ. ಸುಗ್ಗಿಕಾಲದಲ್ಲಿ ಜನರು ಹರ್ಷಿಸುವ ಹಾಗೂ ಕೊಳ್ಳೆಯನ್ನು ಹಂಚಿಕೊಳ್ಳುವವರು ಹೆಚ್ಚಳ ಪಡುವ ಹಾಗೂ ನಿನ್ನ ಮುಂದೆ ಆನಂದಿಸುತ್ತಾರೆ.
4. ಅವರಿಗೆ ಭಾರವಾದ ನೊಗವನ್ನೂ ಬೆನ್ನನ್ನೂ ಹೊಡೆದ ಕೋಲನ್ನೂ, ದೊಣ್ಣೆಯನ್ನೂ ಮಿದ್ಯಾನಿನ ನಾಶ ದಿನದಲ್ಲಿ ಮುರಿದು ಬಿಟ್ಟಂತೆ ಮುರಿದು ಬಿಟ್ಟಿದ್ದೀ.
5. ಯುದ್ಧದ ಗದ್ದಲದಲ್ಲಿ ತುಳಿದಾಡಿದವರೆಲ್ಲರ ಮೆಟ್ಟುಗಳೂ ರಕ್ತದಲ್ಲಿ ಹೊರಳಾಡಿಸಿದ ಉಡುಪುಗಳೂ ಅಗ್ನಿಗೆ ಆಹಾರವಾಗಿ ಸುಟ್ಟು ಹೋಗುವವು.
6. ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು, ಆಡಳಿತವು ಅವನ ಬಾಹುವಿನ ಮೇಲಿರುವುದು, ಅದ್ಭುತ ಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂದು ಅವನ ಹೆಸರು.
7. ಅವನ ಮುಹಿಮಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವುದು. ದಾವೀದನ ರಾಜ್ಯದಲ್ಲಿ ನಿತ್ಯ ಸಮಾಧಾನವಿರುವುದು. ಆ ರಾಜ್ಯವು ಇಂದಿನಿಂದ ಯಾವಾಗಲೂ ನೀತಿ ನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವುದು. ಸೇನಾಧೀಶ್ವರನಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವುದು.

## ನಿಜವಾದ ಬೆಳಕು
## ಯೇಸುಕ್ರಿಸ್ತನು ನಿಮ್ಮ ಕತ್ತಲೆಯನ್ನು ತೆಗೆದು ಹಾಕುವನು!

THE TRUE LIGHT **JESUS CHRIST** WILL REMOVE YOUR DARKNESS!

*ಸಹೋದರಿ ಏಂಜಲ್*



ನಮ್ಮ ಕರ್ತನಾದ ಯೇಸುಕ್ರಿಸ್ತನ ನಾಮದಲ್ಲಿ ಆತನ ಕರೆಯ ಪ್ರತಿಧ್ವನಿಯ ಮುಂದುವರಿದ ಕುಟುಂಬಕ್ಕೆ ನಿಮ್ಮೆಲ್ಲರಿಗೆ ಸಂತೋಷದ ಕ್ರಿಸ್ತಜಯಂತಿಯ ಶುಭಾಶಯಗಳು!

ಕ್ರಿಸ್ತ ಜಯಂತಿಯನ್ನು ಆಚರಿಸಬೇಕಾ ಅಥವಾ ಬೇಡ ಎಂದು ಅನೇಕ ಜನರು ಚರ್ಚೆ ಮಾಡುತ್ತಾರೆ. ಯೇಸುಕ್ರಿಸ್ತನು ನಿಜವಾಗಿಯೂ ಡಿಸೆಂಬರ್ 25 ರಂದು ಹುಟ್ಟಿದ್ದಾನೆಯೇ. ಏನೇ ಹಾಗಲಿ, ಅದು ನಮ್ಮ ಕೇಂದ್ರವಲ್ಲ, ತಿರಸ್ಕರಿಸಲಾಗದ ಸತ್ಯವು ಆತನು ಹುಟ್ಟಿದ್ದಾನೆ. ದೇವರು ಕೂಸಾಗಿ ಈ ಲೋಕಕ್ಕೆ ಬಂದನು. ನಮ್ಮ ರಕ್ಷಣೆಗಾಗಿ ಆತನು ಸತ್ತನು. ಈ ಋತುವಿಗೆ ಯೇಸುಕ್ರಿಸ್ತನೇ ಕಾರಣ ಎಂದು ಸಾರುವ ಅವಕಾಶವಾಗಿ ಈ ಋತುವನ್ನು ಬಳಸಿಕೊಳ್ಳೋಣ.

ಕ್ರಿಸ್‌ಮಸ್ ಕೇವಲ ಶಾಪಿಂಗ್, ಅಲಂಕಾರಗಳು, ಸಾಂತಾಕ್ಲೋಸ್ ಅಥವಾ ಹಬ್ಬದ ಸಂಪ್ರದಾಯಗಳು ಅಲ್ಲ. ಯೇಸುಕ್ರಿಸ್ತನ ಜನನದ ನಿಜವಾದ ಉದ್ದೇಶವನ್ನು ಪ್ರಕಟಿಸುವುದು ಮತ್ತು ಹಂಚಿಕೊಳ್ಳುವುದು.

(3ನೇ ಪುಟಕ್ಕೆ)




**Echo of His Call**

*Christian YouTube Channel!*

**An opportunity to pray with Pr. S. Sam Selva Raj!**

Message & Prayer in 5 minutes!!

**English, Hindi, Tamil & Telugu**

Every day – From 2.00 A.M.

**Tamil Sunday Service – 8.30 A.M.**

* Please Subscribe and Share *

# ECHO OF HIS CALL - (Marching towards 60th year)

Estd. 1969

ECHO OF HIS CALL REACHING NATIONS SINCE 1969 — 1969 TO 2029



## from your dearly beloved brother...

ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ಬಿಡಿಸಬೇಕೆಂತಲೂ ಪುತ್ರ ಪದವಿಯನ್ನು ನಮಗೆ ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು. - ಗಲಾತ್ಯ 4:4





ಕರ್ತನಲ್ಲಿ ಪ್ರೀತಿಯುಳ್ಳವರೇ,

ದೇವರ ಕೃಪೆಯಿಂದ, ಈ ವರ್ಷದ ಕೊನೆಯ ಅಂತಿಮ ತಿಂಗಳಲ್ಲಿ ಪ್ರವೇಶ ಮಾಡಿದ್ದೇವೆ. ನಮ್ಮ ಕರ್ತನು ನಮ್ಮನ್ನು ನಿರಂತರವಾಗಿ ಕಾಪಾಡಿ, ಮಾರ್ಗದರ್ಶನ ಮಾಡಿ ಮತ್ತು ಬಲಪಡಿಸಿದ ಕರ್ತನು ಒಳ್ಳೆಯವನು ಮತ್ತು ನಮ್ಮ ಎಲ್ಲಾ ಸ್ತೋತ್ರಕ್ಕೆ ಅರ್ಹನು. ನಮ್ಮ ಸಭೆಯ ನಾಯಕರು, ಆತನ ಕರೆಯ ಪ್ರತಿಧ್ವನಿಯ ಸಿಬ್ಬಂದಿ ವರ್ಗದವರು, ನೆಹೆಮೀಯ ಸತ್ಯವೇದ ಕಾಲೇಜಿನ ಅಧ್ಯಾಪಕ ವೃಂದ. ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ ಮತ್ತು ಮುದ್ರಣ ತಂಡವು ಪ್ರಾರ್ಥನಾ ಪೂರಕವಾಗಿ ಮತ್ತು ಮುಂಬರುವ ವರ್ಷದಲ್ಲಿ ನಮ್ಮ ಸೇವೆಯ ವಿಸ್ತರಣೆಗೆ ಶ್ರದ್ಧೆಯಿಂದ ಯೋಜನೆಯನ್ನು ಮಾಡುತ್ತಾ ಇದ್ದಾರೆ.

## OUR MISSION POLICY

We should expound and teach the contemporary generation the undiluted teachings of the ancient and early Apostles. It is the need of the hour.

HON. EDITOR-IN-CHIEF
Rev. Dr. Angeline S. Kumari, M.A., M.Sc., M.Ed.
EX MANAGING EDITOR
Pastor Alex Samson Sam, B.Th., M.Div.
GENERAL MANAGER
Bro. N. Prakasam, M.A., M.Sc.(C&P), PGDHRM., MBA.
ADMINISTRATION
Sis. Jesy Veena Sam
Adv. K. Puratchivendan, M.Com., C.A., B.L.
Dr. P.E.R. Premchand, M.Sc., M.A., M.Ed., Ph.D.
Dr. C.G.S. Baburao, B.Tech., M.Tech. (DM), Ph.D.
Dr. Rabinder Boaz, M.S. (CMC)
EDITORIAL BOARD
Dr. Serena Bevin, M.A., M.Phil., B.Ed.
Sis. Sajini Cherian
Rev. Dr. K.R. Rajasekaran
Rev. Dr. William Robert, Ph.D., DD, D.Lit.

EDITOR, PUBLISHER & PRINTER
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 98412 71858
95661 31858
E.MAIL
sam@echoofhiscall.org
biblecor@yahoo.co.in
WEBSITES
www.echoofhiscall.org
www.stpaulsmatriculation.org
YOUTUBE CHANNEL
Echo of His Call



ಮುಖ್ಯ ಸಭೆಯಲ್ಲಿರುವ ಯೌವ್ವನಸ್ಥರ ಸೇವೆಯ ನಾಯಕರುಗಳು

ಸಂತ ಪೌಲ್‌ಮೆಟ್ರಿಕ್ಯುಲೇಷನ್ ಶಾಲೆಯಲ್ಲಿರುವ ಓದುತ್ತಿರುವ ಅನೇಕ ವಿದ್ಯಾರ್ಥಿಗಳು ದೈಹಿಕ ಸವಾಲುಗಳ ಅಥವಾ ಬೇರೆ ಸಮಸ್ಯೆಗಳ ಪರಿಸ್ಥಿತಿಗಳನ್ನು ಎದುರಿಸುತ್ತಾ ಇದ್ದಾರೆ. ಅವರ ಹಿನ್ನಲೆ ಬಗ್ಗೆ ತಿಳಿದುಕೊಂಡರೆ ಆಗಾಗ ಹೃದಯ ವಿದ್ರಾವಕ ವಾಗುತ್ತದೆ. ಆದಾಗ್ಯೂ, ನಮ್ಮ ಶಿಕ್ಷಕರು, ಆಳವಾದ ದಯೆ ಮತ್ತು ಸಮರ್ಪಣೆಯಿಂದ ನಿರಂತರವಾಗಿ ಕಲಿಸುತ್ತಾ, ಪೋಷಣೆ ಮತ್ತು ಮೊದಲ್ಗಿಷ್ಟದಿಂದ ಅವರ ಬಗ್ಗೆ ಕಾಳಜಿಯನ್ನು ವಹಿಸುತ್ತಾ ಇದ್ದಾರೆ.



*Speech by Sister Dr. Renuka on Children's Day at our St. Paul's Matriculation School*

ನಮ್ಮ ಸಭೆಯ ಕೆಲಸಗಾರರು ಪ್ರಾಮಾಣಿಕ ಭಕ್ತಿಯಿಂದ ನಂಬಿಗಸ್ತರಾಗಿ ತಂಡ, ಮಧ್ಯಸ್ಥ ಪ್ರಾರ್ಥನಾ ತಂಡ, ರಾತ್ರಿಯ ಪ್ರಾರ್ಥನಾ ತಂಡ, ಉಪವಾಸ ಸೇವೆಯ ತಂಡ ಮತ್ತು ಆಡಳಿತ ಕಛೇರಿ ತಂಡವು ನಮ್ಮ ದೇಶದ ಉಜ್ಜೀವನ

ಕರ್ತನನ್ನು ಸೇವಿಸುತ್ತಾ ಇದ್ದಾರೆ. ಪ್ರತ್ಯೇಕವಾಗಿ, ನಮ್ಮ ಮಹಿಳಾ ಪ್ರಾರ್ಥನಾ ಪ್ರಾರ್ಥನಾ ತಂಡ, ಭಾನುವಾರ ಶಾಲೆಯ ಶಿಕ್ಷಕರ ತಂಡ, ಯೂಟ್ಯೂಬ್ ಮತ್ತು ನಿರಂತರವಾದ ನಮ್ಮ ಸೇವೆಯ ಬೆಳವಣಿಗೆಗಾಗಿ ಆಸಕ್ತಿಯಿಂದ ಪ್ರಾರ್ಥನೆ

Our Ministries: ECHO OF HIS CALL Monthly Magazines (16 languages) ▫ BIBLECOR - Postal Courses (3 languages) ▫ YouTube Ministry ▫ Online Courses ▫ Theological Correspondence Courses (2 languages) ▫ Church Planting ▫ Nehemiah Bible Colleges ▫ Gospel Printing Press ▫ Great Commission Partners ▫ St. Paul's Matriculation School ▫ Crusades ▫ Community Development



ಉಪವಾಸ ಪ್ರಾರ್ಥನೆಯ ತಂಡ

ಆಹ್ವಾನಿಸುತ್ತೇವೆ. ಈ ತಿಂಗಳು ಎಲ್ಲಾ ತಲುಪದವರನ್ನು ತಲುಪಲು ಮತ್ತು ಮಾಡುತ್ತಾ ಇದ್ದಾರೆ. ಈ ಪ್ರಾರ್ಥನಾ ಸೇವೆಗೆ ನಿಮ್ಮನ್ನು ಪ್ರೀತಿಯಿಂದ ಅವರನ್ನು ದೈವಿಕ ಜೀವನದ ಪೂರ್ಣತೆಗೆ ಕೊಂಡೊಯ್ಯಲು ವಿವಿಧ ಕಾರ್ಯಕ್ರಮಗಳನ್ನು ಯೋಜಿಸಿದ್ದೇವೆ. ಈ ಪ್ರಯತ್ನಗಳಿಗಾಗಿ ನಿಮ್ಮ ಶ್ರದ್ಧಾಪೂರ್ವಕ ಪ್ರಾರ್ಥನೆಗಳನ್ನು ನಾವು ಶ್ರದ್ಧೆಯಿಂದ ಬಯಸುತ್ತೇವೆ.

ನಿಮ್ಮ ನಂಬಿಗಸ್ತಿಕೆಯ ಪ್ರಾರ್ಥನೆಗಳಿಗೆ, ಈ 2025 ಉದ್ದಕ್ಕೂ ತಿಂಗಳ ಹಣಕಾಸಿನ ಸಹಾಯ ಮತ್ತು ಉದಾರವಾದ ವಿಶೇಷವಾದ ಕಾಣಿಕೆಗಳಿಗಾಗಿ ನಾವು ಬಹಳ ಕೃತಜ್ಞತೆಯುಳ್ಳವರಾಗಿದ್ದೇವೆ. ಸೇವೆಯಲ್ಲಿ ನಿಮ್ಮ ಸಹಭಾಗಿತ್ವವು ದೊಡ್ಡ ಆಶೀರ್ವಾದವಾಗಿದೆ. ನಿಮ್ಮ ನಿರಂತರ ಪ್ರಾರ್ಥನೆಗಳು ಮತ್ತು ಅಚಲವಾದ ಸಹಾಯವನ್ನು ಬರುವ ದಿನಗಳಲ್ಲಿ ಮಾಡಬೇಕೆಂದು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ನಾವು ಈ ಸಂತೋಷದ ಋತುವನ್ನು ಆಚರಿಸುತ್ತಿರುವಾಗ, ನಾವು ನಿಮಗೆ ಸಂತೋಷದ ಕ್ರಿಸ್‌ಮಸ್ ಮತ್ತು ಆಶೀರ್ವಾದದ 2026 ವರ್ಷದ ಶುಭಾಶಯಗಳನ್ನು ಹಾರೈಸುತ್ತೇವೆ. ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮ್ಮೆಲ್ಲರೊಂದಿಗೆ ಇರಲಿ.

ಕ್ರಿಸ್ತಯೇಸುವಿನಲ್ಲಿ ನಿಮ್ಮ ಸೇವಕ

ಡಾ. ಎಸ್. ಸ್ಯಾಮ್‌ಸೆಲ್ವರಾಜ್, E.mail : sam@echoofhiscall.org

(1ನೇ ಪುಟದಿಂದ)

ಆತನು ಅನ್ಯದೇಶದವರಿಗೆ ಜ್ಞಾನೋದಯದ ಬೆಳಕು. (ಎಲ್ಲಾ ದೇಶಗಳಿಗೆ). ಯೇಸುಕ್ರಿಸ್ತನು ಸ್ವತಃ ಘೋಷಿಸಿದನು.

ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ ಅಂದನು. ಯೋಹಾನ 9:5. ಆದ್ದರಿಂದ ಕ್ರಿಸ್ಮಸ್ ಈ ದೊಡ್ಡ ಬೆಳಕಿನ ಆಚರಣೆ ಯಾಗಿದೆ.

ಹಾಗಾದರೆ ಬನ್ನಿ ಈ ಬೆಳಕಿನ ಬಗ್ಗೆ ಸತ್ಯವೇದವು ಏನು ಹೇಳುತ್ತದೆ ಎಂಬುದನ್ನು ನೋಡೋಣ.


ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು, ಆದಿಸಾಗರದ ಮೇಲೆ ಕತ್ತಲಿತ್ತು, ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು, ಆದಿಕಾಂಡ 1:2. ಪ್ರಾರಂಭದಲ್ಲಿ ಕೂಡ ಕತ್ತಲೆಯು ಭೂಮಿಯನ್ನು ಆವರಿಸಿತ್ತು, ಆದಾಗ್ಯೂ ದೇವರಾತ್ಮವು ಅದರ ಮೇಲೆ ಚಲಿಸುತ್ತಿತ್ತು. ಮುಟ್ಟದ ಮತ್ತು ಅಲುಗಾಡದ ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ. ಕತ್ತಲು ಅದನ್ನು ಮುಸುಕಲಿಲ್ಲ, ಯೋಹಾನ 1:5

## ಬೇರೆ ಭಾಷಾಂತರಗಳು ಬಹಳ ಸುಂದರವಾಗಿ ವ್ಯಕ್ತಪಡಿಸಿವೆ.

ಕತ್ತಲೆ ಎಂದಿಗೂ ಅದನ್ನು ನಂದಿಸಲು ಸಾಧ್ಯವಿಲ್ಲ (ಎನ್‌ಎಲ್‌ಟಿ)

ಕತ್ತಲು ಅದನ್ನು ಗ್ರಹಿಸಲಿಲ್ಲ (ಕೆಜೆವಿ).

ಕತ್ತಲೆಯು ಅರ್ಥ ಮಾಡಿಕೊಳ್ಳಲಿಲ್ಲ, ಅಥವಾ ಅಧಿಕಾರ ಚಲಾಯಿಸಲಿಲ್ಲ (ಎಎಮ್‌ಪಿ).



ಕತ್ತಲೆಯು ಬೆಳಕಿನಿಂದ ದೂರ ಓಡುತ್ತದೆ.

ಎಲ್ಲೆಲ್ಲಿ ಬೆಳಕು ಕಾಣಿಸುತ್ತದೆಯೋ ಅಲ್ಲಿ ಕತ್ತಲೆಯು ಮಾಯವಾಗುತ್ತದೆ. ಈ ಇವೆರಡರ ಮಧ್ಯದಲ್ಲಿ ಯಾವುದೇ ಸಂಘರ್ಷವು ಇರುವುದಿಲ್ಲ, ಬೆಳಕು ಯಾವಾಗಲೂ ಗೆಲ್ಲುತ್ತದೆ.

## 1. ಪಾಪದ ಮೂಲಕವಾಗಿ ಬೆಳಕು ಪ್ರಕಾಶಿಸುತ್ತದೆ!

ಪಾಪವು ಮನುಷ್ಯರನ್ನು ದೇವರಿಂದ ಬೇರ್ಪಡಿಸುತ್ತದೆ. ಎಲ್ಲರೂ ಆತನ ಮಹಿಮೆಯನ್ನು ಕಳೆದುಕೊಂಡಿದ್ದಾರೆ. ಸೃಷ್ಟಿಯ ಮೂಲ ಉದ್ದೇಶವು ದೇವರು ಮತ್ತು ಮನುಷ್ಯರೊಂದಿಗೆ ಸಹವಾಸ ಇದು ಏದೇನ್ ತೋಟದಲ್ಲಿ ಮುರಿದು ಬಿತ್ತು. ದೇವರು ಮತ್ತು ಮಾನವೀಯತೆಯ ನಡುವೆ ದೊಡ್ಡ ಕಂದಕವನ್ನು ಸೃಷ್ಟಿಸಿತು.

ಯಾವುದೇ ಪ್ರಾಣಿಯ ತ್ಯಾಗವು ನಮ್ಮ ಪಾಪಕ್ಕೆ ನಿಜವಾಗಿಯೂ ಪ್ರಾಯಶ್ಚಿತ್ತವಾಗುವುದಿಲ್ಲ, ದೇವರ ನಿಷ್ಕಳಂಕ ಕುರಿಮರಿ ಯೇಸುಕ್ರಿಸ್ತನ ಬರುವಿಕೆ ಮತ್ತು ತ್ಯಾಗ ಮಾತ್ರ, ತಂದೆಯೊಂದಿಗೆ ಸಂಧಾನ ಮಾಡುವುದಕ್ಕೆ ಸಾಧ್ಯ.

ಯೇಸುಕ್ರಿಸ್ತನು ಈ ಲೋಕಕ್ಕೆ ಬಂದದ್ದು ದೇವರೊಂದಿಗೆ ನಮ್ಮನ್ನು ಮತ್ತೆ ಒಗ್ಗೂಡಿಸುವುದಕ್ಕೆ. ಪಾಪದಿಂದ ಉಂಟಾದ ಮುರಿದ ಸಂಬಂಧವನ್ನು ಸರಿಪಡಿಸಲು.

ಆತನ ಅಮೂಲ್ಯವಾದ ರಕ್ತದಿಂದ, ದೇವರ ಮುಂದೆ ನಾವು ಯಾವುದೇ ಭಯವಿಲ್ಲದೆ ಮತ್ತು ನಾಚಿಕೆ ಇಲ್ಲದೆ ಬರುವುದಕ್ಕೆ ನಮಗೆ ಸೌಭಾಗ್ಯವಿದೆ.

## VERY URGENT NOTICE!




There may be unavoidable disruptions in the postal dispatch of **Echo of His Call** in the near future. If you wish to continue receiving **Echo of His Call** without interruption, please send us your name, address, email, and WhatsApp number via letter, email, phone call, or SMS/WhatsApp message immediately.

Your support helps us serve you better!

**Our address:**

**ECHO OF HIS CALL,**
**10, Mohammed Abdullah 2nd Street, Chepauk, Chennai-600 005, India**
**Cell: (+91) 98412 71858 / 98410 71858 E.mail: sam@echoofhiscall.org**



*ದೇವರ ಬೆಳಕು ನಮಗೆ ಬೇಕಾಗಿದೆ*

ಸೈತಾನನು ಸುಳ್ಳು ವಿಚಾರಗಳನ್ನು ಮತ್ತು ಲೌಕಿಕ ಗೊಂದಲಗಳ ಮೂಲಕ ಅನೇಕರ ಮನಸ್ಸನ್ನು ಕುರುಡುಗೊಳಿಸಿದ್ದಾನೆ. ಈ ಆಧ್ಯಾತ್ಮಿಕ ಕತ್ತಲೆಯನ್ನು ನ್ಯಾವಿಗೇಟ್ ಮಾಡಲು ನಮಗೆ ದೇವರ ಬೆಳಕು ಬೇಕು. ಜಗತ್ತು ಸಾಮಾನ್ಯ ಎಂದು ಕರೆಯುವ ಅನೇಕ ವಿಷಯಗಳ ದೇವರ ಸತ್ಯವನ್ನು ನೇರವಾಗಿ ವಿರೋಧಿಸುತ್ತದೆ.

ಕರ್ತನು ತನ್ನ ಬೆಳಕನ್ನು ನಮ್ಮ ಹೃದಯಗಳಲ್ಲಿ ಪ್ರಕಾಶಿಸಲಿ. ನಮ್ಮ ಮತ್ತು ಆತನ ನಡುವೆ ನಿಂತಿರುವ ಯಾವುದನ್ನಾದರೂ ಬಹಿರಂಗಪಡಿಸುವುದು. ಆದ್ದರಿಂದ ನಾವು ಮರುಸ್ಥಾಪಿಸಲ್ಪಟ್ಟ ಸಹಭಾಗಿತ್ವದಲ್ಲಿ ನಡೆಯಬಹುದು.

## 2. ಕತ್ತಲೆಯಲ್ಲಿ ಬೆಳಕು ಪ್ರಕಾಶಿಸುತ್ತದೆ!

ಎಲ್ಲಾ ಕಡೆ ನಾವು ನೋಡುವಾಗ, ನಾವು ಕತ್ತಲೆಯನ್ನು ನೋಡುತ್ತೇವೆ. ಯುದ್ಧಗಳು, ಬಡತನ, ಭ್ರಷ್ಟತೆ, ಕೊಲೆ, ದ್ವೇಷ ಮತ್ತು ನೀತಿಯು ಕಡಿಮೆಯಾಗುತ್ತದೆ. ಯೌವ್ವನಸ್ಥರು ಹತಾಶೆಯಲ್ಲಿ ಇದ್ದಾರೆ. ಇನ್ನೂ ಕೆಲವರು ತಮ್ಮ ಜೀವನವನ್ನು ಕೊನೆಗಾಣಿಸಿಕೊಳ್ಳುತ್ತಾರೆ. ಸಮಾಜವು ಪಾಪವನ್ನು ಮಹಿಮೆಪಡಿಸುತ್ತದೆ. ನೀತಿಯನ್ನು ಅಪಹಾಸ್ಯ ಗೊಳಿಸುತ್ತದೆ. ಜಗತ್ತು ಪ್ರತಿದಿನ ಕತ್ತಲೆಯಾಗುತ್ತಿದೆ ಎಂದು ಭಾಸವಾಗುತ್ತದೆ.

ಅನೇಕ ಸಾರಿ ಜನರು ಹೀಗೆ ಹೇಳುವುದನ್ನು ಕೇಳಿದ್ದೇವೆ-ನಮ್ಮ ಸಮಯದಲ್ಲಿ ವಿಷಯಗಳು ವ್ಯತ್ಯಾಸವಾಗಿದ್ದವು. ಶಿಕ್ಷಣ, ತಂತ್ರಜ್ಞಾನ ಮತ್ತು ಕುತೂಹಲವು ಅನೇಕ ಬಾಗಿಲುಗಳನ್ನು ತೆರೆದಿದೆ. ಆದರೆ ಎಲ್ಲವುಗಳು ದೇವರಿಂದ ಬಂದವುಗಳು ಅಲ್ಲ.

ಅಂತ್ಯ ದಿನಗಳ ಬಗ್ಗೆ ಸತ್ಯವೇದವು ನಮಗೆ ಎಚ್ಚರಿಸುತ್ತದೆ. ಆದರೆ ಕಡೇ ದಿನಗಳಲ್ಲಿ ಕಠಿಣ ಕಾಲಗಳು ಬರುವವೆಂಬುದನ್ನು ತಿಳಿದುಕೋ ಮನುಷ್ಯರು ಸ್ವಾರ್ಥ ಚಿಂತಕರೂ ಹಣದಾಸೆಯವರೂ ಬಡಾಯಿ ಕೊಚ್ಚುವವರೂ ಅಹಂಕಾರಿಗಳೂ ದೂಷಕರೂ ತಂದೆ ತಾಯಿಗಳಿಗೆ ಅವಿಧೇಯರೂ ಉಪಕಾರನೆನೆಸದವರೂ ದೇವಭಯವಿಲ್ಲದವರೂ ಮಮತೆಯಿಲ್ಲದವರೂ ಸಮಾಧಾನವಾಗದವರೂ ಚಾಡಿ ಹೇಳುವವರೂ ದಮೆಯಿಲ್ಲದವರೂ ಉಗ್ರತೆಯುಳ್ಳವರೂ ಒಳ್ಳೇದನ್ನು ಪ್ರೀತಿಸುವವರೂ ದ್ರೋಹಿಗಳೂ ದುಡುಕಿನವರೂ ಉಬಕೊಂಡವರೂ ದೇವರನ್ನು ಪ್ರೀತಿಸದೆ ಭೋಗಗಳನ್ನೇ ಪ್ರೀತಿಸುವವರೂ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರೂ ಆಗಿರುವವರು. 2 ತಿಮೊಥಿ 3:1-5

ಈ ನೈತಿಕ ಕುಸಿತವನ್ನು ವಿವರಿಸಿದ ನಂತರ, ಪೌಲನು ಇನ್ನು ಸೇರಿಸುತ್ತಾನೆ. ಅಂತಹ ಜನರೊಂದಿಗೆ ಯಾವುದೇ ಸಂಬಂಧವಿಲ್ಲ.

ಈ ಜಗತ್ತು ಇನ್ನೂ ಕತ್ತಲೆಯಿಂದ ಬೆಳೆದರೂ ಕೂಡ, ನೀವು ದೇವರ ಮಹಿಮೆಗಾಗಿ ಪ್ರಕಾಶಿಸಲೇಬೇಕು!



*ಕತ್ತಲೆಯಲ್ಲಿರುವ ಜನರಿಗೆ ದೊಡ್ಡ ಬೆಳಕು ಬಂದಿತು.*

ಕತ್ತಲೆಯಲ್ಲಿ ವಾಸಿಸಿದ ಈ ಸೀಮೆಗಳ ಜನರಿಗೆ ದೊಡ್ಡ ಬೆಳಕು ಕಾಣಿಸಿತು. ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಸೂರ್ಯೋದಯವಾಯಿತು ಎಂಬುದು. ಮತ್ತಾಯ 4: 16

ಈ ಒಂದು ಕ್ರಿಸ್ಮಸ್ ಸಂದರ್ಭದಲ್ಲಿ, ದೇವರು ಪ್ರತಿ ಕತ್ತಲೆಯ ಮೂಲಕ ಬೆಳಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಈ ಜಗತ್ತಿನಲ್ಲಿ ಮಾತ್ರವಲ್ಲದೆ, ಆದರೆ ನಮ್ಮ ಕುಟುಂಬಗಳಲ್ಲಿ, ನಮ್ಮ ವೈಯಕ್ತಿಕ ಜೀವಿತಗಳಲ್ಲಿ ಮತ್ತು ಕೆಲಸ ಮಾಡುವ ಸ್ಥಳಗಳಲ್ಲಿ, ಆತನು ನಮ್ಮ ಪ್ರಪಂಚದ ಬೆಳಕು ಎಂದು ಘೋಷಿಸಲಿ. ನಮ್ಮ ಮನೆಗಳಲ್ಲಿ, ನಮ್ಮ ಮಕ್ಕಳು, ನಮ್ಮ ಮದುವೆಗಳು, ನಮ್ಮ ಶಿಕ್ಷಣ, ನಮ್ಮ ಆರೋಗ್ಯ ಮತ್ತು ನಮ್ಮ ಹಣಕಾಸುಗಳು. ವೈದ್ಯರು, ಸಂಬಂಧಿಕರು, ನಾಯಕರು ಅಥವಾ ಅಧಿಕಾರಿಗಳು ನಮ್ಮ ವಿರುದ್ಧ ಮಾತನಾಡುವ ಪ್ರತಿಯೊಂದು ನಕಾರಾತ್ಮಕ ಶಬ್ದವು ದೇವರ ಬೆಳಕಿನಿಂದ ಮುರಿಯಲ್ಪಡಲಿ!

ನಾವು ಹೊಸವರ್ಷಕ್ಕೆ ಹೆಜ್ಜೆ ಇಡುವಾಗ, ನಾವು ನಂಬಿಕೆಯಿಂದ ನಡೆಯುತ್ತಾ ಮತ್ತು ಯೇಸುಕ್ರಿಸ್ತನಲ್ಲಿ ಸ್ಪಷ್ಟತೆ.

ನೀನೇ ನನ್ನ ದೀಪವನ್ನು ಹೊತ್ತಿಸುವವನಲ್ಲವೇ. ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನು ಕೊಟ್ಟು ಕತ್ತಲೆಯನ್ನು ಪರಿಹರಿಸುವವರು. ಕೀರ್ತನೆ 18:28.

## 3. ಭಯದ ಮೂಲಕವಾಗಿ ಬೆಳಕು ಪ್ರಕಾಶಿಸುತ್ತದೆ!

ಕ್ರಿಸ್ತನ ಜನನದ ಶುಭ ಸಮಾಚಾರವನ್ನು ಕುರುಬರಿಗೆ ತಿಳಿಸಿದಾಗ ಅವರು ಭಯಪಟ್ಟರು. ಆ ಸೀಮೆಯಲ್ಲಿ ಕುರುಬರು ಹೊಲದಲ್ಲಿದ್ದು ಕೊಂಡು ರಾತ್ರಿಯಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿರಲಾಗಿ ಕರ್ತನ ದೂತನೊಬ್ಬನು ಬಂದು ಅವರ ಎದುರಿನಲ್ಲಿ ನಿಂತನು. ಕರ್ತನ ಪ್ರಭೆಯು ಅವರ ಸುತ್ತಲೂ ಪ್ರಕಾಶಿಸಿತು. ಅವರು ಬಹಳವಾಗಿ ಹೆದರಿದರು. ಲೂಕ 2:9-10

ಪರಲೋಕದ ಬೆಳಕು ರಾತ್ರಿ ಆಕಾಶವನ್ನು ಚುಚ್ಚುತ್ತದೆ ಎಂದು ಅವರ ಭಯವನ್ನು ಊಹಿಸಿ!

ಗಬ್ರಿಯೇಲ್‌ನು ಕಾಣಿಸಿಕೊಂಡಾಗ ಮರಿಯಳು ಸಹ ಭಯಪಟ್ಟಳು.



*ಹೆದರಬೇಡ ಮರಿಯಳೇ*

ಆಕೆಯು ಆ ಮಾತಿಗೆ ತತ್ತರಿಸಿ ಇದೆಂಥ ಆಶೀರ್ವಾದ ಎಂದು ಯೋಚನೆ ಮಾಡುತ್ತಿರಲಾಗಿ ಆ ದೂತನು ಆಕೆಗೆ ಮರಿಯಳೇ, ಹೆದರಬೇಡ ನಿನಗೆ ದೇವರ ದಯೆ ದೊರಕಿತು. ಲೂಕ 1:29-30

ಭಯವು ನಿಜವಾಗಿದೆ. ಆದರೆ ಯೇಸುಕ್ರಿಸ್ತನ ಬೆಳಕು ಪ್ರಕಾಶಿಸಿದಾಗ ಭಯವು ಓಡಿ ಹೋಗಲೇ ಬೇಕು.

(ಇನ್ನೇ ಪುಟಕ್ಕೆ ...)

GREAT COMMISSION PARTNERS

ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ. 6:2), ಪ್ರೋತ್ಸಾಹಿಸುವುದು (ರೋಮಾಪುರ. 12:13)
ತ್ವರಿತಗೊಳಿಸುವುದು (II ತಿಮೋಥಿ. 1:6)
ಸ್ತುತಿ ಮತ್ತು ಪ್ರಾರ್ಥನಾ ಮನವಿಗಳು
19 ಡಿಸೆಂಬರ್ 2025 ರಿಂದ 18 ಜನವರಿ 2026 ರ ವರೆಗೆ
(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)

## ಈ ವಿಷಯಗಳಿಗಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸಿರಿ.

ಡಿಸೆಂಬರ್ 19 : ನಮ್ಮ ಭಾಷಾಂತರಕಾರರು, ಸಹಸಂಪಾದಕರು, ರಾಜ್ಯ ಸಂಯೋಜಕರು ಮತ್ತು ಅವರ ಕುಟುಂಬಗಳ ಮೇಲೆ ಅತನ ಆಶೀರ್ವಾದಕ್ಕಾಗಿ.

ಡಿಸೆಂಬರ್ 20 : ನಮ್ಮ ಸಂತ ಪೌಲ್‌ಮೆಟ್ರಿಕ್ಯುಲೇಷನ್ ಶಾಲೆ, ನೆಹೆಮೀಯ ಸತ್ಯವೇದ ಕಾಲೇಜ್, ದೈವಶಾಸ್ತ್ರದ ದೂರಶಿಕ್ಷಣ ಕೋರ್ಸ್‌ಗಳು, ಇವೆಲ್ಲವೂ ಕಡಿಮೆ ಅಗತ್ಯವಿರುವ ಜನರಿಗೆ ಸಹಾಯ ಮಾಡುತ್ತಿದ್ದಾರೆ.

ಡಿಸೆಂಬರ್ 21 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳ ಮೇಲೆ ದೇವರ ದಯೆಗಾಗಿ ಸ್ತೋತ್ರ.

ಡಿಸೆಂಬರ್ 22 : ನಮ್ಮ ವಿಧವಾದ ಸೇವೆಯ ಮೂಲಕವಾಗಿ ತಲುಪದೇ ಇರುವ ಸ್ಥಳಗಳಿಗೆ ಆತ್ಮಗಳನ್ನು ಸಂಧಿಸುವಂತೆ ನಮಗೆ ಆತನು ಸಹಾಯ ಮಾಡಿದ್ದಾನೆ.

ಡಿಸೆಂಬರ್ 23 : ನಮ್ಮ ಸೇವಾ ಕೆಲಸಗಾರರ ಕುಟುಂಬಗಳ ಮೇಲೆ ಆತನ ಹೇರಳವಾದ ಆಶೀರ್ವಾದಕ್ಕಾಗಿ.

ಡಿಸೆಂಬರ್ 24 : ಆತನ ಆಶೀರ್ವಾದ ನಮ್ಮ ಕಾರ್ಯಕರ್ತರ ಕುಟುಂಬಗಳ ಮೇಲೆ ಸುರಿದಿದೆ.

ಡಿಸೆಂಬರ್ 25 : ಈ ವರ್ಷದ ಕ್ರಿಸ್ಮಸ್ ಆಚರಣೆಯ ಮೇಲೆ ಆತನ ಆಶೀರ್ವಾದಕ್ಕಾಗಿ.

ಡಿಸೆಂಬರ್ 26 : ಯೇಸುಕ್ರಿಸ್ತನ ಜನನ, ಈ ಲೋಕದ ರಕ್ಷಕನು, ನಮ್ಮೆಲ್ಲರನ್ನು ವಿಮೋಚಿಸುವುದಕ್ಕಾಗಿ ಬಂದನು.

ಡಿಸೆಂಬರ್ 27 : ನಮ್ಮ ಹಿರಿಯ ಸಭಾ ಪಾಲಕರ ಕುಟುಂಬದ ಮೇಲೆ ದೈವಿಕ ರಕ್ಷಣೆ, ಎಲ್ಲಾ ದುಷ್ಟಶಕ್ತಿಗಳಿಂದ ಬಿಡಿಸಿದ್ದಕ್ಕಾಗಿ.

ಡಿಸೆಂಬರ್ 28 : ನಮ್ಮ ಮುಖ್ಯ ಸಭೆ ಮತ್ತು ಶಾಖಾ ಸಭೆಗಳಲ್ಲಿ ಹೆಚ್ಚು ಭಾನುವಾರ ಶಾಲೆಯ ಮಕ್ಕಳನ್ನು ಕೊಟ್ಟು ಆಶೀರ್ವದಿಸಿದ್ದಕ್ಕಾಗಿ.

ಡಿಸೆಂಬರ್ 29 : ಈ ವರ್ಷದ ಉದ್ದಕ್ಕೂ ದೇವರ ಸೇವಕರುಗಳನ್ನು ದೈವಿಕ ರಕ್ಷಣೆಯಿಂದ ಸಂರಕ್ಷಣೆಗಾಗಿ ಆತನಿಗೆ ಸ್ತೋತ್ರವಾಗಲಿ.

ಡಿಸೆಂಬರ್ 30 : ಈ ವರ್ಷ ಪೂರ್ತಿ ಕ್ರೈಸ್ತ ಸಂಸ್ಥೆಗಳ ಸುಗಮ ಮತ್ತು ಫಲಪ್ರದ ಕಾರ್ಯಾಚರಣೆಗಾಗಿ ಸ್ತೋತ್ರವಾಗಲಿ.

ಡಿಸೆಂಬರ್ 31 : 2025ರಲ್ಲಿ ನಮ್ಮ ಎಲ್ಲಾ ಅಗತ್ಯಗಳನ್ನು ಅದ್ಭುತವಾಗಿ ಪೂರೈಸಿದಕ್ಕಾಗಿ.

ಜನವರಿ 01 : 2026ರ ವರ್ಷದುದ್ದಕ್ಕೂ ಪ್ರಪಂಚದಾದ್ಯಂತ ಎಲ್ಲಾ ಓದುಗರು ಮತ್ತು ಜನರಿಗೆ ಶಾಂತಿಯನ್ನು ಹಾರೈಸುತ್ತೇವೆ.

ಜನವರಿ 02 : ದೇವರು ನಮ್ಮ ಮುಖ್ಯ ಮತ್ತು ಶಾಖೆ ಸಭೆಗಳಲ್ಲಿ ಹೆಚ್ಚು ವಿಶ್ವಾಸಿಗಳೊಂದಿಗೆ ಆಶೀರ್ವದಿಸಿದ್ದಾನೆ.

ಜನವರಿ 03 : 2026ಕ್ಕೆ ಉತ್ತಮ ವಾಗ್ದಾನ ಗಳೊಂದಿಗೆ ಎಲ್ಲಾ ಸಭೆಗಳು ಮತ್ತು ವಿಶ್ವಾಸಿಗಳನ್ನು ಆಶೀರ್ವದಿಸುವುದಕ್ಕಾಗಿ.

## ದಯಮಾಡಿ ಈ ವಿಷಯಗಳಿಗಾಗಿ ಪ್ರಾರ್ಥಿಸಿರಿ.

ಜನವರಿ 04 : ನಮ್ಮ ಕನ್ನಡ ಸಹಸಂಪಾದಕರು ಆದ ಘನ. ರಾಮಕೃಷ್ಣ ಮತ್ತು ಅವರ ಧರ್ಮಪತ್ನಿರವರ ಇತ್ತೀಚಿನ ಅನಾರೋಗ್ಯದಿಂದ ತ್ವರಿತವಾಗಿ ಗುಣವಾಗುವಂತೆ.

ಜನವರಿ 05 : ಪ್ರಪಂಚದ ನಾಯಕರುಗಳು ದೈವತ್ವದ ಜ್ಞಾನದಿಂದ ತುಂಬಾ ಜನರ ಯೋಗಕ್ಷೇಮಕ್ಕಾಗಿ ಕೆಲಸ ಮಾಡುವಂತೆ.

ಜನವರಿ 06 : ನಮ್ಮ ಸಂತ ಪೌಲ್ ಮೆಟ್ರಿಕ್ಯುಲೇಷನ್ ಶಾಲೆ ಮತ್ತು ನೆಹೆಮಿಯ ಸತ್ಯವೇದ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ದೈವತ್ವದ ಸಂರಕ್ಷಣೆಗಾಗಿ.

ಜನವರಿ 07 : ನಮ್ಮ ಸಂಸ್ಥೆಗೆ ಸೂಕ್ತವಾದ ನೌಕರರು ಸಿಗುವಂತೆ.

ಜನವರಿ 08 : ಎಲ್ಲಾ ಕ್ರೈಸ್ತರು ದೇವರ ವಾಕ್ಯವನ್ನು ಅನುಸರಿಸುವಂತೆ ಮತ್ತು ಕ್ರೈಸ್ತ ಗುಣವನ್ನು ತೋರಿಸಲ್ಪಡುವಂತೆ.

ಜನವರಿ 09 : ಈ ತಿಂಗಳ ಎಲ್ಲಾ ಅಗತ್ಯತೆಗಳನ್ನು ದೇವರು ಪೂರೈಸುವಂತೆ.

ಜನವರಿ 10 : ನಮ್ಮ ಸೇವೆಯ ಸಹಭಾಗಿಗಳ ಸಫಲತೆ ಮತ್ತು ರಾಜ್ಯಸಂಯೋಜಕರ ಚಟುವಟಿಕೆಗಳಿಗಾಗಿ.

ಜನವರಿ 11 : ನಮ್ಮ ಸೇವೆಯು ವಿಸ್ತರಿಸುವಂತೆ ಮತ್ತು ಲೋಕದ ಕಟ್ಟಕಡೆಯಲ್ಲಿ ಸುವಾರ್ತೆಯು ತಲುಪುವಂತೆ.

ಜನವರಿ 12 : 2026ರಲ್ಲಿ ಪಾ. ಎಸ್. ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬವನ್ನು ದೇವರು ತನ್ನ ಬಲವುಳ್ಳ ಹಸ್ತದಿಂದ ಉಪಯೋಗಿಸಿಕೊಳ್ಳಲಿ.

ಜನವರಿ 13 : ದುಷ್ಟಶಕ್ತಿಗಳ ವಿರುದ್ಧ ಎಲ್ಲಾ ಸಭೆಗಳ ದೈವಿಕ ರಕ್ಷಣೆಗಾಗಿ.

ಜನವರಿ 14 : ರಾಷ್ಟ್ರಗಳ ಮಧ್ಯ ಶಾಂತಿ ಮತ್ತು ಸಹಕಾರದ ಬೆಳವಣಿಗೆಗಾಗಿ.

ಜನವರಿ 15 : ವಿಶ್ವಾದ್ಯಂತ ಎಲ್ಲಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ನಿರಂತರ ಉತ್ತಮ ಖ್ಯಾತಿಗಾಗಿ.

ಜನವರಿ 16 : ಎಲ್ಲಾ ಸಭೆಗಳು ಮತ್ತು ಕ್ರೈಸ್ತೀಯ ಸಂಘ ಸಂಸ್ಥೆಗಳು ಸರ್ಕಾರದಲ್ಲಿ ನ್ಯಾಯವಾಗಿ ನೋಂದಾಯಿಸುವಂತೆ.

ಜನವರಿ 17 : ನಮ್ಮ ಪ್ರಾರ್ಥನಾ ಸಹಭಾಗಿಗಳು, ಚಂದಾ ಸಹಭಾಗಿಗಳು, ನಂಬಿಕೆಯ ಸಹಭಾಗಿಗಳು, ಜೀವಂತ ಸಹಭಾಗಿಗಳು, ದೊಡ್ಡ ಆಜ್ಞೆಯ ಸಹಭಾಗಿಗಳು ಮತ್ತು ಅವರ ಕುಟುಂಬಗಳ ದೇವರ ಆಶೀರ್ವಾದಗಳು ಉಂಟಾಗುವಂತೆ.

ಜನವರಿ 18 : ಪ್ರಪಂಚದ ಎಲ್ಲಾ ಕಡೆಯಲ್ಲಿ 2026 ರಲ್ಲಿ ಒಳ್ಳೆಯ ಆರೋಗ್ಯ, ಶಾಂತಿ ಮತ್ತು ಸಮೃದ್ಧಿ ಉಂಟಾಗಲಿ.

(4ನೇ ಪುಟದಿಂದ)

ನಾವು ದೇವರ ದೃಷ್ಟಿಯಲ್ಲಿ ಅಮೂಲ್ಯರಾಗಿದ್ದೇವೆ. ನಮ್ಮ ಭಯಗಳನ್ನು ಮಲಗಿಸಿ ಮರಿಯಳ ಹಾಗೆ ಉತ್ತರಿಸೋಣ.

ಇಗೋ, ನಾನು ಕರ್ತನ ದಾಸಿ ನಿನ್ನ ಮಾತಿನಂತೆ ನನಗಾಗಲಿ ಅಂದಳು. ಲೂಕ 1:38



*ನಾವು ದೇವರ ಅಧಿಕಾರಕ್ಕೆ ಒಪ್ಪಿಸಿಕೊಡಬೇಕು. ಎಲ್ಲಾ ವಾಗ್ದಾನಗಳು ನೆರವೇರುತ್ತವೆ.*

ನಾವು ದೇವರ ಅಧಿಕಾರಕ್ಕೆ ಒಪ್ಪಿಸಿ ಕೊಡುವಾಗ ಆತನು ಹೇಳಿದ ಎಲ್ಲಾ ವಾಗ್ದಾನಗಳು ನೆರವೇರುತ್ತವೆ.

ಭಯ ಪಡಬೇಡ - ಕರ್ತನ ಅಧಿಪತಿಯು ನಿಮ್ಮ ಮುಂದೆ ಹೋಗುವನು. ನಿಮ್ಮ ಎಲ್ಲಾ ಯುದ್ಧಗಳನ್ನು ಆತನು ಹೋರಾಡುತ್ತಾನೆ.

ಯೇಸುಕ್ರಿಸ್ತನನ್ನು ಹಿಡಿದುಕೊಳ್ಳಿರಿ. ಆತನು ನಮಗೆ ಸಾಕಾಗಿದ್ದಾನೆ. ಯೇಸುವನ್ನು ಪ್ರಯತ್ನಿಸಿರಿ!

### 4. ನಮ್ಮ ಮುಂದಿನ ಹೆಜ್ಜೆಯನ್ನು ತೋರಿಸುವುದಕ್ಕಾಗಿ ಬೆಳಕು ಪ್ರಕಾಶಿಸುತ್ತದೆ!

ನಮ್ಮ ಮುಂದಿನ ಭವಿಷ್ಯತಿನ ಬಗ್ಗೆ ಭಯಪಡುವ ಅಗತ್ಯವಿಲ್ಲ, ಕರ್ತನು ನಮ್ಮ ನಡೆಸುವ ಬೆಳಕು ಆಗಿದ್ದಾನೆ.

ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ನನ್ನ ದಾರಿಗೆ ಬೆಳಕು ಆಗಿದೆ. ಕೀರ್ತನೆ 119:05

ದೇವರು ಒಂದೇ ಸಾರಿ ಸಂಪೂರ್ಣ ರಸ್ತೆಯನ್ನು ಪ್ರಕಟಿಸುವುದಿಲ್ಲ, ಆದರೆ ಮುಂದಿನ ಹೆಜ್ಜೆಯನ್ನು ಆತನು ತೋರಿಸುತ್ತಾನೆ. ಒಂದೇ ಹೆಜ್ಜೆ ಒಂದು ಸಮಯದಲ್ಲಿ!



ದೇವರು ಒಂದೇ ಸಾರಿ ಸಂಪೂರ್ಣ ರಸ್ತೆಯನ್ನು ಪ್ರಕಟಿಸುವುದಿಲ್ಲ, ಆದರೆ ಮುಂದಿನ ಹೆಜ್ಜೆಯನ್ನು ತೋರಿಸುತ್ತಾನೆ.

ನಮ್ಮ ಜೀವಿತವು ಗಲಿಬಿಲಿ ಇರುವಾಗ, ಎಲ್ಲವೂ ಕತ್ತಲಿನಂತೆ ತೋರುತ್ತಿರುವಾಗ, ಅನೇಕ ಸಾರಿ ನಾವು ಈ ರೀತಿಯಾಗಿ ಕೇಳುತ್ತೇವೆ. ನನಗೆ ಯಾಕೆ ಕರ್ತನೇ? ದಾವಿದನ ಮಾತುಗಳನ್ನು ಜ್ಞಾಪಕ ಮಾಡಿಕೊಳ್ಳಿರಿ.

ನೀನೇ ನನ್ನ ದೀಪವನ್ನು ಹೊತ್ತಿಸುವವನಲ್ಲವೇ. ನನ್ನ ದೇವರಾದ ಯೆಹೋವನು ನನಗೆ ಬೆಳಕನ್ನು ಕೊಟ್ಟು ಕತ್ತಲನ್ನು ಪರಿಹರಿಸುವವನು. ಕೀರ್ತನೆ 18:28

ನಾವು ಹೊಸ ವರ್ಷಕ್ಕೆ ಕಾಲಿಡುವಾಗ, ನಿಮ್ಮ ಕುಟುಂಬಕ್ಕೆ, ಸೇವೆಗೆ ಮತ್ತು ಕೆಲಸಕ್ಕೆ ದೇವರ ನಡೆಸುವಿಕೆಯನ್ನು ಹುಡುಕಿರಿ.

ಆತನನ್ನು ಕೇಳಿರಿ-ಆತನು ಮಾತ್ರವೇ ನಮ್ಮ ಭವಿಷ್ಯತ್ತನ್ನು ಹಿಡಿದುಕೊಳ್ಳುವನು.

### ಯೆಶಾಯದಲ್ಲಿ ದೇವರು ಸವಾಲು ಹಾಕುತ್ತಾ ಇದ್ದಾನೆ!

ನಾನು ಪುರಾತನದವರನ್ನು ಸೃಷ್ಟಿಸಿದಂದಿನಿಂದ ನನ್ನ ಹಾಗೆ ಯಾರು ಪ್ರಕಟಿಸಿಕೊಂಡಿದ್ದಾರೆ? ಅಂಥವರಿದ್ದರೆ ನನ್ನೆದುರಿಗೆ ಹೇಳಿ ಸ್ಥಾಪಿಸಲಿ; ಇಲ್ಲವೆ ಮುಂದಿನವುಗಳನ್ನು ಈಗ ತಿಳಿಸಲಿ, ಭವಿಷ್ಯತ್ತುಗಳನ್ನು ಹೇಳಲಿ. ಯೆಶಾಯ 44:7

ಪ್ರೀತಿಯ ಸ್ನೇಹಿತರೇ, ನಾವು 2026ಕ್ಕೆ ಪ್ರವೇಶವಾಗುವುದಕ್ಕೆ ಮುಂಚೆ, ದೇವರು ಬೆಳಕನ್ನು ಪ್ರಕಾಶಿಸಲು ಮತ್ತು ನಮ್ಮ ಜೀವನ, ನಮ್ಮ ಮಕ್ಕಳು ಮತ್ತು ನಮ್ಮ ಉದ್ದೇಶಕ್ಕಾಗಿ ಆತನ ಯೋಜನೆಗಳನ್ನು ಪ್ರಕಟಿಸಲು ನಾವು ದೇವರನ್ನು ಕೇಳೋಣ. ಮುಂದೆ ಏನಿದೆ ಎಂಬುದನ್ನು ಆತನು ನಿಷ್ಠೆಯಿಂದ ನಮಗೆ ತೋರಿಸುತ್ತಾನೆ.

### 5. ನಮ್ಮ ಸಂರಕ್ಷಿಸಲು ಮತ್ತು ರಕ್ಷಿಸಲು ಬೆಳಕು ಪ್ರಕಾಶಿಸುತ್ತದೆ!

ನನ್ನ ಶತ್ರುವೇ, ನನ್ನ ವಿಷಯದಲ್ಲಿ ಹಿಗ್ಗಬೇಡ ನಾನು ಬಿದ್ದಿದ್ದರೂ ಏಳುವೆನು. ಕತ್ತಲಲ್ಲಿ ಕೂತಿದ್ದರೂ ಯೆಹೋವನು ನನಗೆ ಬೆಳಕಾಗಿರುವನು. ಮೀಕ 7:8

ಎಂತಹ ಶಕ್ತಿಯುತ ವಾಗ್ದಾನ! ನಾವು ನಿರಾಶೆಯಲ್ಲಿ, ಹತಾಶೆಯಲ್ಲಿ, ನಾಚಿಕೆಯಲ್ಲಿ ಕೂತಿರುವಾಗಲೂ, ನಾವು ಮತ್ತೆ ಏಳುತ್ತೇವೆ. ಕರ್ತನು ಸ್ವತಃ ನಮ್ಮ ಬೆಳಕು ಆಗಿದ್ದಾನೆ.

ಭವಿಷ್ಯ 2025ನೇ ವರ್ಷವು ಉತ್ತಮ ವರುಷವಾಗಿರಬಹುದು. ಆದರೆ ಜ್ಞಾಪಕವಿಟ್ಟುಕೊಳ್ಳಿ-ದೇವರ ಸಹಾಯದಿಂದ ಮತ್ತೆ ನೀವು ಏದ್ದೇಳಬಹುದು. ನೀವು ಏನನ್ನು ಕಳೆದುಕೊಂಡಿದ್ದಿರೋ ದೇವರು ಪುನಃಸ್ಥಾಪಿಸುವನು. ನೀವು ಆತನಿಗೆ ನಿಷ್ಠಾವಂತರಾಗಿದ್ದರೆ.

ಇಸ್ರಾಯೇಲ್ಯರು ಕೆಂಪು ಸಮುದ್ರದ ಮುಂದೆ ನಿಂತಾಗ, ಎರಡು ಕಡೆಯಲ್ಲಿ ಬೆಟ್ಟಗುಡ್ಡಗಳು ಮತ್ತು ಫರೋಹನ ಸೈನ್ಯವು ಹಿಂದುಗಡೆ ದೇವರ ಪ್ರಸನ್ನತೆಯು ಅವರನ್ನು ಮುಂದೆ ನಡೆಸಿ ಸಂರಕ್ಷಿಸಿತು.

(8ನೇ ಪುಟಕ್ಕೆ...)

ECHO OF HIS CALL REACHING NATIONS SINCE 1969
NEHEMIAH BIBLE COLLEGES,
Qualification : 10th Standard & above
Chepauk & Santhoshapuram, Velachery Chennai.
Rush for admission! Medium : Tamil (Part Time)
Diploma in Theology & Bachelor of Theology
Hindi (Residential) (Sponsorship Available)
Recognised by International Christian Leaders & Senior Pastors for the past 56 years
Contact : The Chairman, Nehemiah Bible College.
10, MOHAMMED ABDULLAH 2ND STREET, CHEPAUK, CHENNAI - 600 005, INDIA.
Phone : (+91-44) 2852 8282, Cell : (+91) 98410 71852 / 95661 31858
E.mail : sam@echoofhiscall.org / Website : www.echoofhiscall.org

## MAIN CHURCH PROGRAMMES

1. Prayer Service : 24 hours
2. **ECHO OF HIS CALL** - Monthly Magazines :English, Tamil, Malayalam, Telugu, Hindi, Kannada, Marathi, Gujarati, Bengali, Odiya, Nepali, Assamese, Punjabi, Urdu, Sinhala & Afrikan.
3. **BIBLECOR -** Basic Bible Courses (English, Tamil & Hindi)
4. Theological Correspondence Courses: English & Tamil
5. Nehemiah Bible Colleges (Chepauk, Santhoshapuram & Velachery)
6. Branch Churches: Santhoshapuram, Balaji Nagar & Velachery
7. Great Commission Partners (Network of Pastors)
8. Training Programmes – Seminars & Retreats
9. Crusades
10. Literature Distribution and Follow Up
11. Gospel Printing Press - Publications
12. St. Paul's Matriculation School - Village English High School
13. Sunday Schools (Chepauk) : 10.30 a.m. Sunday & (Velachery, Balaji Nagar & Santhoshapuram) 3.00 p.m. Sunday
14. **Early Morning Service : 5.30 a.m. Sunday**
15. **Preliminary Service : 8.00 a.m. Sunday**
16. **Tamil Service : 8.30 a.m. Sunday**
17. **Youth Meeting : 11.00 a.m. Sunday**
18. **Fellowship Lunch : 1.00 p.m. Sunday**
19. **Telugu Service : 4.00 p.m. Sunday**
20. **Hindi Service : 5.00 p.m. Sunday**
21. **Tamil & English Service : 6.00 p.m. Sunday**
22. Feedback Time : 7.30 p.m. Sunday
23. Women's Prayer : 5.30 p.m. Wednesday
24. Men's Prayer : 7.30 p.m. Friday
25. Discipleship Meeting : 6.00 p.m. Saturday
26. House Meetings : 6.30 p.m. Tuesday & Thursday
27. Special Holy Communion : 6.00 a.m. 1st day of each month
28. Ministers' Meeting : 5.30 p.m. First Saturday
29. Parents' Prayer : 4.00 p.m. First Sunday
30. Night Prayer : 9.30 p.m. Third Friday
31. Fasting Prayer : 9:30 a.m. Second Saturday
32. Holy Communion : Second Sunday Service
33. Youth / Kid Prayer : 10.00 p.m. daily (over phone)
34. Staff Devotion : 9.00 a.m. daily
35. Office : 9.00 a.m. to 9.00 p.m. (except Sundays)

## Echo of His Call Postal Courses for candidates in India

### 1. BIBLECOR

We offer Postal Course on Basic Truths of The Bible to new Christians and non-Christians in English – 57 pages, Hindi – 76 pages & Tamil – 96 pages. You will get a Course Book entitled **New Life – For You!** **After the completion of this course, you will get a certificate. There will be no compulsory fees. You will be blessed!** - Editor

### 2. THEOLOGICAL CORRESPONDENCE COURSE

Advanced Distance Education called **Theological Correspondence Course** is available in English – 537 pages and Tamil – 652 pages for Pastors, Evangelists, Christian Leaders and for lay people who have passion to do God's Ministry! A fee of Rs. 1000/- is charged. 7 Books with 149 Chapters are supplied. **Certificate in Ministry** will be awarded. **God will bless you!**

***For more details, write to us.***

**The Chairman, Nehemiah Bible College,**
Echo of His Call, **Post Box 2957**
CHEPAUK, CHENNAI - 600 005.
**Ph.: (044) 2852 8282, 2852 9293, 2854 7766,**
**Cell : 98410 71852, 95661 31858**
**E.mail : biblecor@yahoo.co.in**

## A good opportunity to get Echo of His Call monthly magazine at free of cost

If you could send the addresses of your friends / relatives through post, letter, e.mail, WhatsApp or phone to us, we will dispatch **Echo of His Call** monthly magazine to them at free of cost.

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | |
|---|---|
| **Account Name** | : **ECHO OF HIS CALL EDUCATIONAL TRUST** |
| **Account Number** | : **1023 2923 805** |
| **Bank Name** | : **STATE BANK OF INDIA** |
| **Branch** | : **TRIPLICANE, CHENNAI - 600 005** |
| **IFSC Code** | : **SBIN 0000249** |
| **SWIFT Code** | : **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರಿಗೆ ಅರ್ಥವಾಗಲಿ." (ಮತ್ತಾಯ 24:15)

## ಮಹಿಮೆಯುಳ್ಳ ದೇವರು!

ರೋಗಿಗಳನ್ನು ಸ್ವಸ್ಥ ಮಾಡಿರಿ, ಸತ್ತವರನ್ನು ಬದುಕಿಸಿರಿ. ಕುಷ್ಠ ಹತ್ತಿದವರನ್ನು ಶುದ್ಧ ಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ.
ಮತ್ತಾಯ 10:08

ನನ್ನ ಪ್ರಾರಂಭದ ದಿನಗಳಲ್ಲಿ, ದೇವರು ದೊಡ್ಡ ಅದ್ಭುತ ಕಾರ್ಯಗಳನ್ನು ಮತ್ತು ಮಹತ್ಕಾರ್ಯಗಳನ್ನು ನನ್ನ ಸೇವಾ ಜೀವಿತದಲ್ಲಿ ಮಾಡುತ್ತಿದ್ದನು. ನನ್ನ ಇತಿಮಿತಿಗಳ ಹೊರತಾಗಿ, ನನ್ನ ತುರ್ತು ಅಗತ್ಯತೆಗಳ ಸಮಯಗಳಲ್ಲಿ ದೇವರು ತನ್ನ ಪರಿಶುದ್ಧ ದೇವದೂತರನ್ನು ಕಳುಹಿಸಿದನು. ಅನೇಕ ಸಂದರ್ಭಗಳಲ್ಲಿ, ನಾನು ಆತನನ್ನು ಕರೆದಾಗಲೆಲ್ಲಾ ನನ್ನ ಮೇಲೆ ಸುರಿಸಿದ ದೇವರ ಶಕ್ತಿಯನ್ನು ನಾನು ನೋಡಿದ್ದೇನೆ.

1993 ನೇ ವರ್ಷದಲ್ಲಿ, ಯಾರೋ ನನ್ನನ್ನು ಕರೆದು ಹೇಳಿದರು. ಮದ್ರಾಸ್ ನಗರದಿಂದ ಸುಮಾರು 35 ಕಿಲೋಮೀಟರ್ ದೂರದಲ್ಲಿ ವಾಸಿಸುತ್ತಿದ್ದ ಶ್ರೀಮತಿ ರೋಸ್ ಮೇರಿ ಎಂಬ ಮಹಿಳೆಯು ದುಷ್ಟಶಕ್ತಿಯ ದಾಳಿ ಮತ್ತು ಸ್ವಾಧೀನದಿಂದ ಅನೇಕ ವರ್ಷಗಳಿಂದ ಬಳಲುತ್ತಿದ್ದಳು. ಇದರಿಂದ ಆಕೆಯು ಊಟ ಮಾಡುವುದು ಮತ್ತು ಮಲಗುವುದಕ್ಕೆ ಆಗುತ್ತಿರಲಿಲ್ಲ. ಕುಟುಂಬಸ್ಥರ ಪ್ರಾಣ ತೆಗೆಯುತ್ತೇನೆ ಎಂದು ಬೆದರಿಕೆ ಹಾಕುವುದು ಆಕೆಗೆ ಅಭ್ಯಾಸವಾಗಿತ್ತು. ಅನೇಕ ಸಮಯಗಳಲ್ಲಿ ಆತ್ಮಹತ್ಯೆಯನ್ನು ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟಳು. ಆಕೆಯನ್ನು ಹತೋಟಿಯಲ್ಲಿ ತರುವುದಕ್ಕೆ, ಆಕೆಯ ಕೈ ಮತ್ತು ಕಾಲ್‌ಗಳನ್ನು ಕಟ್ಟಿ ಹಾಕಿ ಒಂದು ಪ್ರತ್ಯೇಕವಾದ ಕೋಣೆಯಲ್ಲಿ ಹಾಕಿದ್ದರು.

ಆಕೆಯ ಬಿಡುಗಡೆಗಾಗಿ ಆಕೆಯ ಕುಟುಂಬಸ್ಥರು ನನ್ನನ್ನು ಕರೆದಾಗ, ನಾನು ಕೆಲವು ಸಮಯ ಪ್ರಾರ್ಥನೆಯಲ್ಲಿ ಕಳೆದೆನು. ಆತ್ಮೀಯ ನಡೆಸುವಿಕೆಯನ್ನು ಪಡೆದುಕೊಂಡು, ಆ ಕುಟುಂಬಸ್ಥರು ತಂಗಿರುವ ಸ್ಥಳಕ್ಕೆ ಹೋದೆನು. ನನ್ನ ಮನೆಯಲ್ಲಿ ಹೊರಡುವ ಸಮಯದಲ್ಲಿ ಸೈತಾನನಿಂದ ವಿರೋಧವನ್ನು ಅನುಭವಿಸಿದನು. ನಾನು ಆ ಸ್ಥಳವನ್ನು ಮುಟ್ಟುವುದಕ್ಕೆ ಮುಂಚಿತವಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಸೈತಾನನು ನನ್ನನ್ನು ಆಕ್ರಮಣ ಮಾಡಿದನು.

ಆ ಸ್ತ್ರೀಯ ಮನೆಯನ್ನು ಪ್ರವೇಶಿಸಿದಾಗ, ಆಕೆಯ ಕೈಕಾಲುಗಳನ್ನು ಬಿಚ್ಚಿ ಸ್ವತಂತ್ರವಾಗಿ ಬಿಡಿರಿ ಎಂದು ನಾನು ಆ ಕುಟುಂಬಸ್ಥರಿಗೆ ಹೇಳಿದೆನು. ಆಕೆಯನ್ನು ಬಿಚ್ಚಿದ ತಕ್ಷಣವೇ ಆಕೆಯು ನನ್ನ ಹತ್ತಿರ ಬಂದು ಕೆಟ್ಟ ಮಾತುಗಳನ್ನು ಮಾತನಾಡುವುದಕ್ಕೆ ಪ್ರಾರಂಭಿಸಿದಳು. ಆಕೆಯು ನನ್ನಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಪ್ರಯತ್ನಿಸಿದಳು. ಆ ಸಮಯದಲ್ಲಿ ನಾನು ಯೇಸುಕ್ರಿಸ್ತನಲ್ಲಿ ಯೌವ್ವನ ವಿಶ್ವಾಸಿಯಾಗಿದ್ದೆನು. ಕರ್ತನು ನನಗೆ ವಿಶೇಷ ಧೈರ್ಯ ಮತ್ತು ಶಕ್ತಿಯನ್ನು ಆ ಸೈತಾನನ್ನು ಎದುರಿಸುವ ಕೊಟ್ಟನು.



ನನ್ನ ಸಂಪೂರ್ಣ ಭರವಸೆಯನ್ನು ಕರ್ತನಾದ ಯೇಸುಕ್ರಿಸ್ತನಲ್ಲಿ ಹಾಕಿ ನಾನು ನನ್ನ ಬಾಯಿಯನ್ನು ತೆರೆದು ಆ ಸ್ತ್ರೀಗೆ ಹಿಡಿದಿರುವ ಸೈತಾನನ ಶಕ್ತಿಯನ್ನು ಆಜ್ಞಾಪಿಸಿದೆನು. ತಕ್ಷಣವೇ, ಮಹಿಳೆಯ ಚಟುವಟಿಕೆಗಳು ಅನಿಯಂತ್ರಿತವಾದವು ಮತ್ತು ಅವಳು ಮೇಲಕ್ಕೆ ಮತ್ತು ಕೆಳಕ್ಕೆ ಹಾರಿ ಛಾವಣಿಯ ಕಿರಣವನ್ನು ಹಿಡಿದು ತನ್ನ ಕಾಲುಗಳಿಂದ ಜನರ ಮೇಲೆ ದಾಳಿ ಮಾಡಲು ಪ್ರಯತ್ನಿಸಿದಳು.

ಆಕೆಯನ್ನು ಯಾರು ಹತೋಟಿಗೆ ತೆಗೆದುಕೊಂಡು ಬರುವುದಕ್ಕೆ ಆಗಲಿಲ್ಲ. ನನ್ನ ಸುತ್ತಮುತ್ತ ಇರುವ ಜನರು ನನ್ನನ್ನು ಮುಖವನ್ನು ಆಶ್ಚರ್ಯದಿಂದ ನೋಡುವುದಕ್ಕೆ ಪ್ರಾರಂಭಿಸಿದರು. ಆದರೆ ನನ್ನಲ್ಲಿ ಕರ್ತನಾದ ಯೇಸುಕ್ರಿಸ್ತನ ಶಕ್ತಿಯನ್ನು ಅನುಭವಿಸಿದೆನು. ದೇವರು ಖಂಡಿತವಾಗಿ ಮಧ್ಯ ಪ್ರವೇಶಿಸುತ್ತಾನೆಂದು ನನಗೆ ಸಂಪೂರ್ಣ ಭರವಸೆ ಇತ್ತು.

ಅಂತಿಮವಾಗಿ ಸೈತಾನನಿಗೆ ಈ ಸ್ತ್ರೀಯ ಮೇಲೆ ಯಾವ ಅಧಿಕಾರವು ಇಲ್ಲವೆಂದು ನಾನು ಆಜ್ಞಾಪಿಸಿದೆನು. ನಜರೇತ್ ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ, ಈಗಲೇ ಈ ಸ್ತ್ರೀಯನ್ನು ಬಿಟ್ಟು ಹೋಗಬೇಕೆಂದು ಆಜ್ಞಾಪಿಸುತ್ತೇನೆ. ನಿನ್ನ ಬಾಯಿಯನ್ನು ಮುಚ್ಚಿಕೊ. ಕರ್ತನಾದ ಯೇಸುಕ್ರಿಸ್ತನ ಹೆಸರಿನಲ್ಲಿ ಕೆಳಗೆ ಇಳಿದು ಬಾ. ಈಗಲೇ ಈ ಸ್ತ್ರೀಯನ್ನು ಬಿಟ್ಟು ತೊಲಗು ಎಂದು ನಾನು ಆಜ್ಞಾಪಿಸುತ್ತೇನೆ.

ತಕ್ಷಣವೇ, ಆಕೆಯು ಕೂಗುವುದನ್ನು ನಿಲ್ಲಿಸಿ ಮತ್ತು ಸತ್ತದೇಹದ ಹಾಗೆ ಕೆಳಗೆ ಬಿದ್ದಳು. ನಂತರ ನಾನು ನನ್ನ ಕೈಯನ್ನು ಆಕೆಯ ತಲೆಯ ಮೇಲೆ ಇಟ್ಟು ಕರ್ತನೇ ಈಕೆಗೆ ತಾಜಾ ಮತ್ತು ಹೊಸಜೀವನ ಕೊಡು ಎಂದು ಕೇಳಿದೆನು. ತಕ್ಷಣವೇ ಆಕೆಗೆ ಪ್ರಜ್ಞೆಬಂದಿತು. ಆಕೆಯು ಎಲ್ಲರನ್ನು ಬಹಳ ಆಶ್ಚರ್ಯವಾಗಿ ನೋಡಿದಳು. ಆ ಸಮಯದಿಂದ ಅವಳು ದೆವ್ವದ ಹಿಡಿತದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿದಳು ಮತ್ತು ಸಾಮಾನ್ಯ ಕ್ರೈಸ್ತ ಜೀವನವನ್ನು ನಡೆಸಲು ಪ್ರಾರಂಭಿಸಿದಳು.

ಪ್ರೀತಿಯ ಓದುಗರೇ, ಅದೇ ಯೇಸುಕ್ರಿಸ್ತನು ಇನ್ನೂ ಜೀವಂತ ಮತ್ತು ನಿಮಗಾಗಿ ಮತ್ತು ನಮಗಾಗಿ ಲಭ್ಯವಿದ್ದಾನೆ. ನಿಮ್ಮ ಜೀವಿತದಲ್ಲಿ ಎಂತಹ ಅದ್ಭುತ ಕಾರ್ಯಗಳನ್ನು ಮಾಡಬಲ್ಲನು. ಆತನನ್ನು ಸ್ವೀಕರಿಸಿರಿ, ನಿಮ್ಮ ಪಾಪಗಳನ್ನು ಅರಿಕೆ ಮಾಡಿ ಆತನನ್ನು ಹಿಂಬಾಲಿಸಿರಿ. ಕರ್ತನು ತನ್ನ ವಾಕ್ಯಗಳನ್ನು ಚಿಹ್ನೆಗಳು ಮತ್ತು ಅದ್ಭುತಗಳ ಮೂಲಕ ದೃಢೀಕರಿಸುವ ಪ್ರಪಂಚದ ಹಲವಾರು ಭಾಗಗಳಿಗೆ ನನ್ನನ್ನು ಕರೆದೊಯ್ದಿದ್ದಾನೆ. ಆತನು ನಿಮ್ಮನ್ನು ಬಹಳವಾಗಿ ಪ್ರೀತಿಸುತ್ತಾನೆ. ನನ್ನ ಪ್ರಿಯ ಸ್ನೇಹಿತನೇ ದೇವರು ನಿಮ್ಮನ್ನು ಆಶೀರ್ವದಿಸಲಿ.

**************

(6ನೇ ಪುಟದಿಂದ)

ಆಗ ಇಸ್ರಾಯೇಲ್ಯರ ದಂಡಿನ ಮುಂದೆ ಹೋಗುತ್ತಿದ್ದ ದೇವದೂತನು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದಕ್ಕೆ ಬಂದನು. ಅವರ ಮುಂದಾಗಿದ್ದ ಮೇಘಸ್ತಂಭವು ಅಲ್ಲಿಂದ



The cloud brought darkness to one side and light to the other side

ಬಂದು ಅವರ ಹಿಂದೆ ನಿಂತುಕೊಂಡಿತು. ಆ ಮೇಘಸ್ತಂಭವು ಐಗುಪ್ತರ ಪಾಳೆಯಕ್ಕೂ ಇಸ್ರಾಯೇಲ್ಯರ ಪಾಳೆಯಕ್ಕೂ ನಡುವೆ ಬಂದು ಕತ್ತಲನ್ನು ಉಂಟು ಮಾಡಿದರೂ ರಾತ್ರಿಯನ್ನೂ ಬೆಳಕು ಮಾಡಿತು. ಆ ರಾತ್ರಿಯೆಲ್ಲಾ ಒಬ್ಬರ ಹತ್ತಿರಕ್ಕೆ ಒಬ್ಬರು ಬರಲಿಲ್ಲ. ವಿಮೋಚನಕಾಂಡ 14:9-20. ದೇವರು ತನ್ನ ಜನರ ನಡುವೆ ನಿಂತನು. ಅವರ ವೈರಿಗಳು ಬೆಂಕಿಯ ಕಂಬದ ಮೂಲಕ ಬೆಳಕು ಮತ್ತು ರಕ್ಷಣೆ ಎರಡನ್ನೂ ತರುತ್ತದೆ. ದೇವರ ಜನರು ಸುರಕ್ಷಿತವಾಗಿರುವವರೆಗೆ ರಾತ್ರಿಯಿಡೀ ಹೊಳೆಯುವ ಮೂಲಕ ದೇವರು ಅವರನ್ನು ಫರೋಹನ ಸೈನ್ಯದಿಂದ ರಕ್ಷಿಸಿದನು.

ಪ್ರೀತಿಯ ಸಹೋದರ ಮತ್ತು ಸಹೋದರಿಯರೇ, ಕರ್ತನು ನಿಮ್ಮ ಮುಂದೆ ಹೋಗುತ್ತಾ ಇದ್ದಾನೆ. ಆತನು ಕೊರಕಲ ದಾರಿಗಳನ್ನು ನೇರವಾಗಿ ಮಾಡುತ್ತಾನೆ. ನಿಮ್ಮ ಹಿಂದೆ ಆತನು ನಡೆಯುತ್ತಾ ಇದ್ದಾನೆ. ಆತನು ಇರುತ್ತಾನೆ. ಈ ಸತ್ಯವನ್ನು ವಿವರಿಸುವ ಸುಂದರವಾದ ಚಿಕ್ಕದಿ ಕಥೆಯಿದೆ. ತಂದೆ ಮತ್ತು ಮಗನು ಒಂದು ಏಕಾಂತವಾದ ದಾರಿಯಲ್ಲಿ ನಡೆಯುತ್ತಾ ಇದ್ದರು. ಅವರ ಮುಂದೆ ಕಳ್ಳನು ಬಂದಾಗ, ತಂದೆಯು ಅವನನ್ನು ಹಿಂದಕ್ಕೆ ಎಳೆದು ರಕ್ಷಿಸಿದನು. ನಂತರ, ಅಡವಿಯ ಪ್ರಾಣಿಯು ಅವರ ಹಿಂದೆ ಬಂದಾಗ, ತಂದೆಯು ಅವನನ್ನು ಮುಂದೆ ಎಳೆದು ಎರಡು ಕಡೆಯಿಂದ ಅಪಾಯವು ಬಂದಾಗ, ತಂದೆಯು ತನ್ನ



The father lifted his son onto his shoulders and carried him to safety


ಮಗನನ್ನು ತನ್ನ ಹೆಗಲ ಮೇಲೆ ಹೊತ್ತು ಕೊಂಡು ಅವನನ್ನು ಸುರಕ್ಷಿತವಾಗಿ ನಡೆಸಿದನು.

ಅದೇ ರೀತಿಯಾಗಿ, ನಮ್ಮ ಪರಲೋಕದ ತಂದೆಯು ನಮ್ಮನ್ನು ಸಂರಕ್ಷಿಸುತ್ತಾನೆ. ಆತನಿಗೆ ಗೊತ್ತು ನಮ್ಮ ಮುಂದೆ ಯಾವಾಗ ಹೋಗಬೇಕೆಂದು. ಯಾವಾಗ ನಮ್ಮ ಹಿಂದೆ ನಿಂತುಕೊಳ್ಳಬೇಕು ಮತ್ತು ಯಾವಾಗ ನಮ್ಮನ್ನು ಹೊತ್ತುಕೊಳ್ಳಬೇಕು. ನಿಮ್ಮ ಯುದ್ಧಗಳನ್ನು ದೇವರು ಹೋರಾಡಲಿ. ಆತನು ಸೇನಾಧೀಶ್ವರನಾದ ಕರ್ತನು ಆಗಿದ್ದಾನೆ!

## ಸಾರಾಂಶ!

*ಬೆಳಕು ಪ್ರಕಾಶಿಸುತ್ತದೆ. ನಾವು ಬೆಳಕಾಗಿ ಇರುವುದಕ್ಕೆ ದೇವರು ನಮ್ಮ ಬೆಳಕು ಆಗಿದ್ದಾನೆ.*

ಆದರೆ ನಾವು ಕೂಡ ಈ ಕತ್ತಲೆಯ ಲೋಕದಲ್ಲಿ ಬೆಳಕನ್ನು ಹೊರುವವರಾಗಿರಬೇಕೆಂದು ಆತನು ನಮ್ಮನ್ನು ಕರೆದಿದ್ದಾನೆ.



He calls us to be light-bearers in this dark world

ನೀವಾದರೋ ನಿಮ್ಮನ್ನು ಕತ್ತಲೆಯೊಳಗಿಂದ ಕರೆದು ತನ್ನ ಆಶ್ಚರ್ಯಕರವಾದ ಬೆಳಕಿನಲ್ಲಿ, 1 ಪೇತ್ರ 2:9 ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. ಮತ್ತಾಯ 5:16

ನಮ್ಮ ಜೀವಿತವು ದೇವರ ಒಳ್ಳೆಯತನ ಮತ್ತು ಸತ್ಯವನ್ನು ತೋರಿಸಬೇಕು. ನಿಮ್ಮ ಕಾರ್ಯಗಳು ನಿಮ್ಮ ಮಾತುಗಳಿಂದ ಹೆಚ್ಚು ಮಾತನಾಡಬೇಕು. ನಿಮ್ಮ ದಯೆಗಳ, ಕಾರ್ಯಗಳು ಮತ್ತು ಪ್ರಾಮಾಣಿಕತೆಯ ಮೂಲಕ ಕ್ರಿಸ್ತನನ್ನು ಬೇರೆಯವರಿಗೆ ತೋರಿಸಬೇಕು.

ನನ್ನ ಪ್ರೀತಿಯ ಸ್ನೇಹಿತರೇ, 2026 ಏನು ಇದೆ ಎಂಬುದು ನಮಗೆ ಗೊತ್ತಿಲ್ಲ. ಆದರೆ ಯಾರು ಹಿಡಿದುಕೊಂಡಿದ್ದಾರೋ ಆತನ ಮೇಲೆ ಭರವಸೆ ಇಡಿರಿ. ಭಯಪಡಬೇಡಿರಿ. ನಿಮ್ಮ ಜೀವಿತದ ಪ್ರತಿಯೊಂದು ಭಾಗದ ಮೂಲಕ ದೇವರ ಬೆಳಕು ಪ್ರಕಾಶಿಸಲಿ.

ನಾಳಿನ ಬಗ್ಗೆ ಚಿಂತೆ ಮಾಡಬೇಡಿರಿ! ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವುದು. ಮತ್ತಾಯ 6:34

ಈ ಹೊತ್ತಿನ ದಿನದಲ್ಲಿ ನೀವು ಯಾವುದೇ ಭಾರವನ್ನು ಹೊತ್ತುಕೊಂಡಿದ್ದರೆ - ಜ್ಞಾಪಕವಿರಲಿ -ಯೇಸು ಈ ಲೋಕಕ್ಕೆ ಬೆಳಕಾಗಿದ್ದಾನೆ. ನಿಮ್ಮ ಎಲ್ಲಾ ಅನಿಶ್ಚಿತೆ ಮತ್ತು ಭಯವನ್ನು ಬೆಳಕು ಪ್ರಕಾಶಿಸುತ್ತದೆ. ನಿಮ್ಮ ಕತ್ತಲೆಗಿಂತ ಆತನ ಬೆಳಕು ಬಹಳ ಬಲವಾಗಿದೆ. ನಿಮ್ಮ ಎಲ್ಲಾ ಸಮಸ್ಯೆಗಳಿಗಿಂತ ಆತನ ಶಾಂತಿಯು ದೊಡ್ಡದಾಗಿದೆ. ನಿಮ್ಮ ವಿರೋಧ ಗಳಿಗಿಂತ ಆತನ ಶಕ್ತಿಯು ಬಲವಾಗಿದೆ.

ನಿನ್ನ ಬಳಿಯಲ್ಲಿ ಜೀವದ ಬುಗ್ಗೆ ಇರುವ; ನಿನ್ನ ತೇಜಸ್ಸು ನಮಗೆ ಬೆಳಕು ಕೊಡುತ್ತದೆ. ಕೀರ್ತನೆ 36:9

xxxxxxxxxxxxxxxxxxxxxxxx

**NOTICE**

Please store the Mobile Phone numbers (+91) 98410 71858, (+91) 98412 71858 of Pastor S. Sam Selva Raj on your mobile phones.

- Editor

Posted at "Egmore RMS Patrika Channel" RNI NO. 70107/98, Postal Regn. No. TN/CH (C)/195/24-26 WPP NO. TN/PMG(CCR)/WPP-219/24-26

## Echo of His Call

**YouTube**

Please subscribe

Kindly view and subscribe our **Echo of His Call YouTube Channel** when you get time. Thanks.

- Editor

## OUR BANK DETAILS:

### 1. Bank : State Bank of India

| | | |
|---|---|---|
| Branch | : | **Triplicane, Chennai-5** |
| Name | : | **S. Sam Selva Raj** |
| A/C No. | : | **1023 2934 679** |
| IFSC | : | **SBIN 00 00 249** |

SWIFT CODE : **SBI NIN BB 455**

### 2. Bank : ICICI Bank

| | | |
|---|---|---|
| Branch | : | **Anna Salai, Chennai-6** |
| Name | : | **Echo of His Call** |
| A/C No. | : | **6038 0502 2319** |
| IFSC | : | **ICIC 000 6038** |

### 3. Bank : State Bank of India

**(This Account is for Tax Exemption for Indians only )**

| | | |
|---|---|---|
| Branch | : | **Triplicane, Chennai-5** |
| Name | : | **Echo of His Call Educational Trust** |
| A/C No. | : | **1023 2923 805** |
| IFSC | : | **SBIN 00 00 249** |

**Google Pay: 98410 71858**
**PayPal : SAM SELVA RAJ**

*****

E.mail : sam@echoofhiscall.org

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

**Annual Subscription : Rs. 100/-** **Life Subscription : Rs. 2000/-**

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.org

**YOU CAN SEND YOUR DONATION ONLINE ALSO**

RNI NO. 70107/98
Postal Regn. No. TN/CH/(C)/195/24-26
WPP NO. TN/PMG(CCR)/WPP- 219/24-26
Date of Publication: Second week of every month
Date of Posting : 9th & 10th of every month
Posted at "Egmore RMS Patrika Channel"
on 10th DECEMBER 2025.

If un-delivered please return to:

**ECHO OF HIS CALL (KANNADA)**
P.O. Box No. 2957,
Chepauk, Chennai - 600 005, INDIA.
Phone: (+ 91- 44) 2852 8282, 2852 9293, 2854 7766

## *JESUS LOVES YOU!*

To

*GOD BLESS YOU!*

Owned and published by **S. Sam Selva Raj** from New No. 8 & 10, Old No.18 & 19, Mohammed Abdullah 2nd Street, Chepauk, Chennai-600 005 and printed by **S. Sam Selva Raj** at **Echo of His Call Printers,** New No. 8 & 10, Old No.18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**